ಸಾಮಾಜಿಕ ಬಹಿಷ್ಕಾರ ವಿರುದ್ಧ ಪ್ರತಿಭಟನೆ

ಮನುಷ್ಯ ಮನುಷ್ಯರ ನಡುವೆ ಅಮಾನವೀಯ ಸಂಬಂಧದ ಕಂದಕ ಉಂಟುಮಾಡಿದ ಹೇಯವಾದ ಹಿಂದೂಧರ್ಮದ ಜಾತಿ-ಅಸ್ಪೃಶ್ಯತೆ ಈ ಮೂವತ್ತ ಮೂರು ವರ್ಷಗಳ ಪ್ರಜಾಸತ್ತೆಯಲ್ಲೂ ಜೀವಂತವಾಗಿ ಉಳಿದು ದಲಿತರ ಬದುಕಿಗೆ ಮುಳ್ಳಾಗಿದೆ. ಈ ಹೇಯ ಧರ್ಮದ ಕಾಯರ್ಾಚರಣೆಯನ್ನೇ ಬಂಡವಾಳವನ್ನಾಗಿ ಮಾಡಿಕೊಂಡ ಮೇಲ್ಜಾತಿಯ ಅನೇಕ ಜನ ದಲಿತರ ಬದುಕನ್ನು ಕೃತಕವಾಗಿ ಅದುಮಿಟ್ಟುಕೊಂಡು ಪಶುವಂತೆ ನೋಡುತ್ತಿದಾರೆ.

ದೇಶದಾದ್ಯಂತ ಅಸ್ಪೃಶ್ಯತೆ ವ್ಯಾಪಕವಾಗಿ ಇರುವ ಜತೆಗೆ ನಮ್ಮ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಮುಖ್ಯವಾಗಿ ಕೋಲಾರ, ತುಮಕೂರು, ಮಂಡ್ಯ, ಮೈಸೂರು ಮತ್ತು ಗುಲ್ಬರ್ಗಾ ಜಿಲ್ಲೆಗಳ ಅನೇಕ ಹಳ್ಳಿಗಳಲ್ಲಿ ದಲಿತರಿಗೆ ಸಾಮಾಜಿಕ ಬಹಿಷ್ಕಾರ ವಿಧಿಸಿ ದಲಿತರ ಮಾಮೂಲು ಜೀವನಕ್ಕೆ ಅಡ್ಡಿ ಉಂಟು-ಮಾಡುವ ಮೂಲಕ ಹಿಂಸಿಸಲಾಗುತ್ತಿದೆ. ಬಾವಿಗಳಲ್ಲಿ ನೀರು ತೆಗೆಯಲು ನಿಷೇಧ ಮಾಡುವುದರ ಜತೆಗೆ, ಕೂಲಿಗೆ ಕರೆಯದಿರುವುದು, ಅಂಗಡಿಗಳಲ್ಲಿ ದವಸಧಾನ್ಯ ನಿರಾಕರಣೆ, ಸವರ್ಣೀಯ ಬೀದಿಗಳಲ್ಲಿ ಸಂಚಾರ ನಿಷೇಧ ಮುಂತಾದ ಅಕ್ರಮ ಪದ್ಧತಿಗಳ ಆಚರಣೆಯಿಂದ ಮೇಲ್ಜಾತಿಯ ಅನೇಕ ಜನ ದಲಿತರನ್ನು ಅವಮಾನವೀಯವಾಗಿ ನಡೆಸಿಕೊಳ್ಳುತ್ತಿರುವ ಬಗ್ಗೆ ಪೊಲೀಸ್-ಸರ್ಕಾರ ನಿಷ್ಕ್ರಿಯವಾಗೇ ಇದೆ.

ಸರ್ಕಾರದ ಈ ನಿಷ್ಕ್ರಿಯತೆ ಮತ್ತು ಅಮಾನವೀಯವಾದ ಅಸ್ಪೃಶ್ಯತೆ-ಸಾಮಾಜಿಕ ಬಹಿಷ್ಕಾರದ ವಿರುದ್ಧ ಪ್ರತಿಭಟನೆ ಸೂಚಿಸಲು ಕರ್ನಾಟಕ ದಲಿತ ಸಂಘರ್ಷ ಸಮಿತಿ ದಲಿತ ಮಹಾನಾಯಕ ಡಾ॥ ಬಿ. ಆರ್. ಅಂಬೇಡ್ಕರ್ ಅವರ 24ನೇ ಸ್ಮರಣ ದಿನವನ್ನು "ಸಾಮಾಜಿಕ ಬಹಿಷ್ಕಾರ ಪ್ರತಿಭಟನಾ ದಿನ"ವನ್ನಾಗಿ ರಾಜ್ಯಾದ್ಯಂತ ಆಚರಿಸಲಿದೆ.

ಪಂಚಮ

ಎಲ್ಲ ಬಗೆಯ ಆರ್ಥಿಕ, ಧಾರ್ಮಿಕ, ಸಾಮಾಜಿಕ, ಬೌದ್ಧಿಕ ದಬ್ಬಾಳಿಕೆಯ ವಿರುದ್ಧ ದಲಿತರಲ್ಲಿ ಪ್ರಜ್ಞೆ ಮೂಡಿಸಲು ಯತ್ನಿಸುತ್ತಿರುವ ಪಂಚಮಕ್ಕೆ ಚಂದಾದಾರರಾಗಿರಿ.

ಲೇಖನ.ಸುದ್ದಿ ಕಳುಹಿಸುವ ಮೂಲಕ ನೋವುಳ್ಳವರ ನುಡಿಯಾಗಿರುವ ಪಂಚಮವನ್ನು ನಿಮ್ಮ ದನಿಯನ್ನಾಗಿಸಿಕೊಳ್ಳಿ.

ಸಂಪುಟ : 4 ಸಂಚಿಕೆ : 19-20 5, ಡಿಸೆಂಬರ್ 1980 ಪಾಕ್ಷಿಕ ಬೆಲೆ : 20 ಪೈಸೆ

ವಾರ್ಷಿಕ ಚಂದಾ 5 ರೂ.ಗಳು

ಕಾರ್ಮಿಕ ವಿವಾದ ಹೊತ್ತಿಸಿದ ಬೆಂಕಿ

ಮೈಸೂರಿಂದ 8 ಕಿ ಮೀ. ದೂರವಿರುವ ಬೆಳಗೊಳದಲ್ಲಿ ನವಂಬರ್ 8 ರಂದು ದೀಪಾವಳಿ ನಡೆಯಿತು, ಹಣಭೂಮಿ ಅಹಂಕಾರಗಳಿಂದ ಕೊಬ್ಬಿದ ಸವರ್ಣೀಯರ ಗುಂಪೊಂದು ಹರಿಜನರ ಗುಡಿಸಲುಗಳಿಗೆ ಬೆಂಕಿ ಹಚ್ಚಿ ದೀಪಾವಳಿ ಆಚರಿಸಿತು ! ಪೊಲೀಸರು 'ಅಸಹಾಯಕತೆ' ವ್ಯಕ್ತಪಡಿಸಿ ಹರಿಜನರನ್ನು ಸಮಾಧಾನ ಮಾಡಿದರು !

ಮೈಸೂರು ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರ ತಂಡವೊಂದು ಬೆಳಗೊಳಕ್ಕೆ ಭೇಟಿಕೊಟ್ಟಾಗ ಏಳು ಗುಡಿಸಲುಗಳು ಬೂದಿಯಾಗಿದ್ದವು. ಜುಲಿಗೋಡೆಗಳ ನಡುವೆ ಹೊಟ್ಟೆಹೊರೆಯಲು ಇಟ್ಟಿದ್ದ ದಾನ್ಯ, ಬಟ್ಟೆ ಪಾತ್ರೆಗಳು ಬೆಂದು ಕರಕಲಾಗಿದ್ದವು. ಬೇರೆಯವರ ಪಡಸಾಲೆಗಳಲ್ಲಿ ಅನಾಥರಾಗಿ ಕುಂತಿದ್ದ ಬೆಂದ ಮನೆಯವರು ಕಣ್ಣಾರೆ ಕಂಡದ್ದನ್ನು ಕಣ್ಣೀರಿಡುತ್ತ ಹೇಳಿಕೊಂಡರು.

ಬೆಳಗೊಳ ಪೇಪರ್ ಮಿಲ್ಸ್‌ನ ಎರಡು ಕಾರ್ಮಿಕ ಸಂಘಗಳ ನಡುವೆ ತೀವ್ರ ಪೈಪೋಟಿ ನಡೆಯುತ್ತಿದ್ದು ಇದರ ಆಧಾರದ ಮೇಲೆ ಬೆಳಗೊಳ ಗ್ರಾಮದ ಒಕ್ಕಲಿಗರ ಕೇರಿ ಎರಡು ಗುಂಪಾಗಿ ಒಡೆದಿದೆ. ಪೇಪರ್ ಮಿಲ್ಸ್‌ನ ಕಾರ್ಮಿಕ ವಿವಾದವೊಂದರಿಂದ ಹುಟ್ಟಿದ ದ್ವೇಷ ನವಂಬರ್ 8ರ ಬೆಳಿಗ್ಗೆ ಒಕ್ಕಲಿಗರ ಕೇರಿಯ ಎರಡು

(2ನೇ ಪುಟ ನೋಡಿ)

ರೈತ ಚಳುವಳಿ ಬೆಂಬಲಿಸಿ 12 ರಂದು ಬೃಹತ್ ರ್ಯಾಲಿ

ರಾಜ್ಯಾದ್ಯಂತ ನಡೆಯುತ್ತಿರುವ ರೈತ ಚಳುವಳಿಯನ್ನು ಬೆಂಬಲಿಸಲು ಮತ್ತು ಹಳ್ಳಿಯ ಬಡವರ ಸಮಸ್ಯೆಗಳ ಪರಿಹಾರಕ್ಕಾಗಿ ಸರ್ಕಾರವನು ಒತ್ತಾಯಿಸಲು ಡಿಸೆಂಬರ್ 12 ರಂದು ಬೆಂಗಳೂರಿನ ವಿಧಾನ ಸೌಧದ ಎದುರು ರಾಜ್ಯದ ನಾನಾ ಕಡೆಗಳಿಂದ ರೈತ-ಕಾರ್ಮಿಕರ ಬೃಹತ್ ಮತಪ್ರದರ್ಶನ ನಡೆಯಲಿದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ನಡೆಯುವ ಈ ಪ್ರದರ್ಶತದಲ್ಲಿ ಎಲ್ಲ ಪ್ರಗತಿಪರ ಸಂಘಟನೆಗಳು ಭಾಗವಹಿಸಲಿದೆ,

'ಗಾಂಧಿ : ರ್‍ಯಾಡಿಕಲ್ ದಲಿತನ ದೃಷ್ಟಿಯಲ್ಲಿ ಢೋಂಗಿ'

ಮನಜ ಅವರ 'ಆಗಸ್ಟ ಹದಿನೈದು' ಮತ್ತು 'ಗಾಂಧಿ ನೆನಪು' ಕವನಗಳ ಬಗ್ಗೆ ತುಮಕೂರಿನ ಮರಡಹಳ್ಳಿ ಜಯಣ್ಣ ಅವರ ಪ್ರತಿಕ್ರಿಯೆ ಓದಿದೆ. ಓದುತ್ತಿದ್ದಂತೆ ಇವರು ಚೆಡ್ಡಿ ಪಾರ್ಟಿ (ಆರೆಸ್ಸೆಸ್ಸ್) ಯುವರೆಂದು ಅರ್ಥಮಾಡಿಕೊಳ್ಳಲು ನನಗೆ ಹೆಚ್ಚು ಕಾಲ ಬೇಕಾಗಲಿಲ್ಲ. ಸ್ವಾತಂತ್ರ್ಯ ಬಂದು 33 ವರ್ಷಗಳಾದರೂ ದಲಿತರನ್ನು ಸಾಮೂಹಿಕವಾಗಿ ಜೀವಂತ ಸುಡುತ್ತಿರುವುದಾಗಲಿ ಅಥವಾ ಉಣ್ಣಲು-ಮಲಗಲು ಮನೆಯಿಲ್ಲದೆ ಶೇ. 40ರಷ್ಟು ಜನ ಇನ್ನೂ ಕಡುಬಡತನದಿಂದ ದಿನನಿತ್ಯ ಹಸಿವಿನಿಂದ ಸಾಯುತ್ತಿರುವ

ಪ್ರತಿಕ್ರಿಯೆ

ವಾಸ್ತವ ಸಂಗತಿಗೆ ಇವರ ಸ್ವಾತಂತ್ರ್ಯದೇವಿ ಅಥವಾ ಭಾರತಾಂಬೆ ಏನು ಉತ್ತರ ಕೊಡುತ್ತಾಳೋ ಗೊತ್ತಿಲ್ಲ. ಆದ್ದರಿಂದ ಅರ್ಥವಿಲ್ಲದ ಈ ದೇಶದ ಸ್ವಾತಂತ್ರ್ಯವನ್ನು ದಲಿತನೊಬ್ಬ ಹೀಗಳೆದಿದ್ದರೆ ಅದು ಅವನ ಎಚ್ಚೆತ್ತ ಮನೋಭಾವವನ್ನು ತೋರಿಸುತ್ತದೆ. ಇದು ಇಂದಿನ ಸ್ಥಿತಿಯಲ್ಲಿ ದಲಿತರಲ್ಲಿ ಮೂಡುತ್ತಿರುವ ಒಳ್ಳೆಯ ಬೆಳವಣಿಗೆ.

ಇನ್ನು ಗಾಂಧಿಯ ಬಗ್ಗೆ. "ಗಾಂಧಿ ದಲಿತರ ಹಿತೈಷಿ ಮತ್ತು ದಲಿತರ ಶತ್ರುವಂತೂ ಖಂಡಿತವಾಗಿಯೂ ಅಲ್ಲ" ಎಂದಿದ್ದಾರೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ತನ ಜನರ ವಿಮೋಚನೆಗಾಗಿ ಸೊಲ್ಲೆತ್ತಿದ ಅಂಬೇಡ್ಕರ್ ಅವರ ಬಾಯಿ ಮುಚ್ಚಿಸಲು ಗಾಂಧಿ ಮಾಡಿದ ಕುತಂತ್ರ ಒಂದಲ್ಲ ಎರಡಲ್ಲ, ಹಲವು. ದಲಿತರ ಪೂರ್ಣ ಸ್ವಾತಂತ್ರ್ಯಕ್ಕಾಗಿ ಅಂಬೇಡ್ಕರ್ ಪ್ರತ್ಯೇಕ ಚುನಾವಣೆ ಪದ್ಧತಿ ಮತ್ತು ದಲಿತಸ್ಥಾನ ಕೇಳಿದಾಗ ಆಮರಣಾಂತ ಉಪವಾಸ ಕೈಗೊಂಡು ಅಂಬೇಡ್ಕರ್ ರವರು ತಮ್ಮ ಬೇಡಿಕೆಗಳನ್ನು ಕೈಬಿಡುವಂತೆ ಒತ್ತಾಯಿಸಿದರು ಅಸ್ಪೃಶ್ಯರ ವಿಮೋಚನೆಯ ಹಾದಿಗೆ ಕಲ್ಲಾಕಿದರು. ಅಂಬೇಡ್ಕರ್ ಅವರ ಮಾತಿನಲ್ಲೇ ಹೇಳಬೇಕಾದರೆ "ಗಾಂಧಿ ಅಸ್ಪೃಶ್ಯರ ಒಬ್ಬ ಖಳನಾಯಕ-ಶತ್ರು" ಗಾಂಧಿ ಸತ್ತಾಗಲೂ "my enemy is dead" ಎಂದಷ್ಟೇ ಹೇಳಿಕೊಟ್ಟರು. ಶತಶತಮಾನಗಳಿಂದ ಶೋಷಣೆಗೆ ಸಿಕ್ಕ ಜನರ ಮಾನವೀಯತೆಗಾಗಿ ಹೋರಾಡುತ್ತಿದ್ದ ಅಂಬೇಡ್ಕರ್‌ರವರಿಗೆ 'ಹರಿಜನ ಸೇವೆ'ಯ ಗಾಂಧಿ ಸಹಜವಾಗಿಯೇ ಮಿತ್ರರಾಗಬೇಕಾಗಿತ್ತು. ಆದರೆ ಈ "ಮಹಾತ್ಮ" ಅಂಬೇಡ್ಕರ್‌ರವರಿಗೆ ಒಬ್ಬ ಶತ್ರುವಾಗಿ ಕಾಣಬೇಕಾದರೆ ಪ್ರಬಲವಾದ ಕಾರಣಗಳೇನೆಂಬುದನ್ನು ಅರಿಯಲು ಅಂಬೇಡ್ಕರ್ ಅವರ Gandhi and Gandhism ಮತ್ತು What Gandhi and Congress dane to Harijans ಎಂಬ ಕೃತಿಗಳೇ ಉತ್ತರ ಕೊಡುತ್ತವೆ

ಇನ್ನು ಜಾತಿ ಪದ್ಧತಿ-ಅಸ್ಪೃಶ್ಯತೆಯನ್ನು ಪೋಷಿಸುವ ಹಿಂದೂ ವರ್ಣಾಶ್ರಮ ಧರ್ಮವನ್ನು ಪ್ರತಿಪಾದಿಸುತ್ತ ನರಸಿಂಹ ಮೆಹತಾ ಎಂಬ ಸಾಧುವೊಬ್ಬನಿಂದ ಕದ್ದು ತಂದ "ಹರಿಜನ" ಎಂಬ ಪದವನ್ನ ಅಸ್ಪೃಶ್ಯರ ಹಣೆಗೆ ಅಂಟಿಸಿ ಅಸ್ಪೃಶ್ಯತೆ ವಿರುದ್ಧ ಮಾತನಾಡುತ್ತಿದ್ದ ಗಾಂಧಿಯು ಒಬ್ಬ ರ್‍ಯಾಡಿಕಲ್ ದಲಿತನೊಬ್ಬನ ದೃಷ್ಟಿಯಲ್ಲಿ ಹಿಪೋಕ್ರಾಟ್ ಅಲ್ಲದೆ ಮತ್ತೇನು? ಎಂಬುದನ್ನು ಜಯಣ್ಣನವರು ತಿಳಿದುಕೊಳ್ಳುತ್ತಾರೆಂದು ಭಾವಿಸುತ್ತೇನೆ.

—ಶಂಕರ್

ಬೆಂಗಳೂರು.

ಹೃದಯಕ್ಕೆ ಕಿಚ್ಚು ಹಚ್ಚಿದ ಕವನ

ನವೆಂಬರ್ 5ರ ತಮ್ಮ ಪತ್ರಿಕೆಯಲ್ಲಿ ಪ್ರಕಟವಾದ ರಮಾಕುಮಾರಿಯವರ ಕವನ 'ನನ್ನ ಜನ' ದಲಿತ ಜನಾಂಗದ ಶೋಷಣೆಯನ್ನು ದಟ್ಟವಾಗಿ ವಿಷದೀಕರಿಸುತ್ತಾ, ದಬ್ಬಾಳಿಕೆ ವಿರುದ್ಧದ ಧ್ವನಿ ತುಂಬಿಕೊಂಡು ಹಲವು ಮಜಲುಗಳಲ್ಲಿ ಸಾಗಿದ ಕವನ; ನಮ್ಮ ಹೃದಯಕ್ಕೆ ಕಿಚ್ಚನ್ನು ಹಚ್ಚುವುದು 'ತಂಗ್ಳಟ್ಟಿನ್ ಮುಣ್ಕೆ ನುಗ್ಗಲಾದೋರು ನನ್ ಜನ್ರವಾ ನನ್ ಜನ್ರು' ಎನ್ನುವಲ್ಲಿ ಕಾವ್ಯದ ಕಾವಿನ ಗಟ್ಟಿತನ ಪ್ರಕಟವಾಗುವುದು. ಇಂತಹ ಸಂಕೀರ್ಣತೆಯಿಂದ ಎಂದುಕೊಂಡರೂ, ಭ್ರಾಂತಿಯಿಂದ ತೊಳಲುತ್ತಿರುವ ನನ್ನ ಜನ ಕ್ರಾಂತಿಯನ್ನು ಮೈಗೂಡಿಸಿಕೊಂಡು ಸಿಡಿದೇಳುವುದಕ್ಕೆ ನಾವು ಇನ್ನೂ ಎಷ್ಟು ವರ್ಷ ಕಾಯಬೇಕಾದೀತೋ! 'ಸರ್ವಜನ ಸುಖಿನೋಭವಂತು' ಎಂದುಕೊಳ್ಳುವ ಈ ದರಿದ್ರ ದೇಶದಲ್ಲಿ ಅಮಾನವೀಯತೆಯಿಂದ ತುಂಬಿದ ಅಮಾಯಕರೇ ದಲಿತರ ಶತ್ರುಗಳು.

ಬೆಂಗಳೂರು —ಮೂರ್ತಿ

ಕೋಲಾರ ರೈತ ಚಳುವಳಿ : ಡಿಯಸೆಸ್ ಕಾರ್ಯಕರ್ತರ ಬಂಧನ ಬಿಡುಗಡೆ

ಕೋಲಾರ ಜಿಲ್ಲೆಯಲ್ಲಿ ವ್ಯಾಪಕವಾಗಿ ಸಿಡಿದೆದ್ದಿರುವ ರೈತ ಚಳುವಳಿಯಲ್ಲಿ ಸ್ಥಳೀಯ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಭಾಗವಹಿಸಿ ಸರ್ಕಾರಿ ಕಚೇರಿಗಳ ಮುಂದೆ ಪಿಕೆಟಿಂಗ್ ನಡೆಸಿ ಬಂಧಿತರಾಗಿದ್ದರು

ಚಿನ್ನ ಕೊಡುವ ಈ ಜನರ ಅನ್ನದ ಕೂಗಿಗೆ ಸರ್ಕಾರ ಕೂಡಲೇ ಗಮನಹರಿಸಬೇಕಾದುದು ತೀರಾ ಅಗತ್ಯ.

ಡಿ.ಎಸ್.ಎಫ್. ಗೆ ಜಯ

ಬೆಂಗಳೂರಿನ ಎಸ್. ಎಲ್. ಎಸ್. ಆರ್ ಸಿ. ಕಾನೂನು ಕಾಲೇಜಿನ ವಿದ್ಯಾರ್ಥಿ ಸಂಘಕ್ಕೆ ದಲಿತ ವಿದ್ಯಾರ್ಥಿ ರಂಗದ (ಡಿ. ಎಸ್. ಎಫ್) ಎಲ್. ಹನುಮಂತಯ್ಯ ಅವರು ಉಪಾಧ್ಯಕ್ಷರಾಗಿ ಇತ್ತೀಚೆಗೆ ಆಯ್ಕೆಗೊಂಡರು.

ಕಾರ್ಮಿಕ ವಿವಾದ ಹೊತ್ತಿಸಿದ ಬೆಂಕಿ

(1ನೇ ಪುಟದಿಂದ)

ಗುಂಪುಗಳ ನಡುವಿನ ಘರ್ಷಣೆಯಾಗಿ ಸಿಡಿಯಿತು ಪೊಲೀಸರ ಮಧ್ಯಪ್ರವೇಶದಿಂದಾಗಿ ಘರ್ಷಣೆಗಳೇನೊ ನಿಂತಿತು. ಆದರೆ ಆಕ್ರೋಶಗೊಂಡಿದ್ದ ಒಂದು ಗುಂಪು ತಾನು ಹಿಡಿದಿದ್ದ ಆಯುಧಗಳ ಸಮೇತ ಪಕ್ಕದಲ್ಲೇ ಇದ್ದ ಹರಿಜನರ ಕೇರಿಗೆ ನುಗ್ಗಿ ಬೆಂಕಿಹಾಕಿತು.

ದಲಿತರ ಕಣ್ಣುತೆರೆಸಿದ ಅಂಬೇಡ್ಕರ್ ಅವರ ಒಂದು ಸ್ಮರಣೆ

1956 ಡಿಸೆಂಬರ್ 6ರಂದು ದಲಿತರ ಮಾನವೀಯ ಹಕ್ಕುಗಳಿಗಾಗಿ ಹೋರಾಟ ನಡೆಸಿದ್ದ, ಹೀನ ಹಿಂದೂ ಧರ್ಮದ ವಿರುದ್ಧ ಸಮಾನತೆ ಸೋದರತ್ವ, ಭ್ರಾತೃತ್ವದ ಹೆಸರಿನಲ್ಲಿ ಅಸ್ಪೃಶ್ಯರನ್ನು ಆವರಿಸಿದ್ದ ಕಗ್ಗತ್ತಲೆಯ ಗೋಳವನ್ನು ಸೀಳಿಬಂದ ಕ್ರಾಂತಿಕಾರಿ ಡಾ. ಭೀಮಜಿ ರಾಮಜಿ ಅಂಬೇಡ್ಕರ್ ಕಣ್ಣು ಮುಚ್ಚಿದವರು ಮತ್ತೆ ಕಣ್ಣು ತೆರೆಯಲಿಲ್ಲ. ಆದರೆ ಅವರ ಹುಟ್ಟು ಹೋರಾಟ ಚಿಂತನೆಗಳು ಇನ್ನೂ ಕಗ್ಗತ್ತಲೆಯಲ್ಲೇ ಇರುವ ಅಸಂಖ್ಯಾತ ದಲಿತರ ಕಣ್ಣು ತೆರೆಸುವಲ್ಲಿ ತೊಡಗಿವೆ.

ಅಂಬೇಡ್ಕರ್ ಅವರ ಚಿಂತನೆಗಳಿಂದ ಪೂರ್ಣವಾಗಿ ತೆರೆದ ಕಣ್ಣುಗಳು ಈವರೆಗೆ ಬೆರಳೆಣಿಕೆಯಷ್ಟು ಇಲ್ಲವೇನೊ ? ಆದರೂ ಇವಿಷ್ಟು ಕಣ್ಣುಗಳಿಗೆ ಕಾಣುತ್ತಿರುವ ಇಂಡಿಯಾ ಅತ್ಯಂತ ಕ್ರೂರ-ಕರಾಳ, ಏಕೆಂದರೆ ಜಾತಿ-ಅಸ್ಪೃಶ್ಯತೆ ನೆಲಗಟ್ಟಿನ ಮೇಲಿನ ನಿಂತ ಈ ಸಮಾಜ ಮನುಷ್ಯ ಮನುಷ್ಯರ ನಡುವೆ ಕೀಳು-ಮೇಲು ಎಂಬ ಭಾವನೆ ಸೃಷ್ಟಿಸಿ ಮಾನವೀಯ ಸಂಬಂಧವನ್ನೇ ಕಡಿದು ಹಾಕಿದೆ. ಮನುಷ್ಯರೊಳಗೇ ಸಹಜವಾಗಿ ಇರಬೇಕಾಗಿದ್ದ ಪ್ರೀತಿ-ವಿಶ್ವಾಸದ ಬದಲು ಅದು ಕ್ರೋಧ, ಕ್ರೌರ್ಯ, ಕಚ್ಚಾಟದ ವಿಷವರ್ತುಲವನ್ನೇ ಉಂಟುಮಾಡಿದೆ.

ಈ ವಿಷವರ್ತುಲದಲ್ಲೇ ಬೆಳೆದು ಹಬ್ಬಿರುವ ಇಂಡಿಯಾದಲ್ಲಿ ಈಗ ದಿನನಿತ್ಯ ಕಾಣುವುದು ದಲಿತರ ಕಗ್ಗೊಲೆ, ನಮ್ಮ ಮಹಿಳೆಯರ ಮೇಲಿನ ಅತ್ಯಾಚಾರ ಇತ್ಯಾದಿ ಇತ್ಯಾದಿ.

ಈ ಬಗೆಯ ಕೊಲೆ-ಸುಲಿಗೆಗಳಿಂದ ನರಳಿ-ಕೊರಳಿ ಸಾಯುತ್ತಿರುವ ಕೋಟಿಕೋಟಿ ದಲಿತರ ರಕ್ಷಣೆ ಈಗ ಕಣ್ಣುತೆರೆದ ದಲಿತ ಯುವಕರ ಮೇಲಿದೆ.



ಆದ್ದರಿಂದ ಅಂಬೇಡ್ಕರ್ ಅವರೇ ಹೇಳುತ್ತಿದ್ದಂತೆ ದಲಿತ ಯುವಕರ ಮೊದಲ ಕೆಲಸ ದಲಿತರೆಲ್ಲರನ್ನು ಒಗ್ಗೂಡಿಸುವುದು. ಅವರಿಗೆ ಜಾಗೃತಿ-ಸಂಘಟನೆ ಮತ್ತು ಹೋರಾಟದ ಮೊದಲ ಪಾಠ ಹೇಳಿಕೊಡುವುದು. ನಮಗಿರುವ ಎರಡು ಕೈಗಳು ಯಂತ್ರದಂತೆ ಹಗಲಿರುಳೂ ದುಡಿಯುತ್ತಿದ್ದರೂ ತುತ್ತುಕೂಳು, ಗಂಜಿಯಿಲ್ಲದೆ ಉಣ್ಣುವ ಒಂದೇ ಒಂದು ಬಾಯಿಯ ಆಕ್ರಂದನಕ್ಕೆ ಕಾರಣವೇನೆಂಬುದನ್ನು ಕಂಡುಕೊಂಡು ಈ ಅಳುವ ಬಾಯಿ ನಗುವಂತೆ ಮಾಡಬೇಕಾಗಿದೆ.

ಅದಕ್ಕಾಗಿ ಈ ದೇಶದ ಚರಿತ್ರೆಯಲ್ಲಿನ ಕುತಂತ್ರಗಳ ಬಗ್ಗೆ, ಈಗಿನ ರಾಜಕೀಯ ದಲಿತ ಮುಂದಾಳುಗಳ ಹಿಪಾಕ್ರಸಿಯ ಬಗ್ಗೆ ಮತ್ತು ನಮ್ಮನ್ನಾಳುತ್ತ ದಿನನಿತ್ಯ ನಮ್ಮನ್ನು ವಂಚಿಸುತ್ತಿರುವ ಈ ಸರ್ಕಾರಗಳ ದಗಲ್‌ಬಾಜಿ ರಾಜಕೀಯದ ಬಗ್ಗೆ ಎಚ್ಚರಿಕೆ ವಹಿಸಿ ಸಮಾಜದಲ್ಲಿನ ಕಡೆಯ ಮನುಷ್ಯನ ಉನ್ನತಿಗಾಗಿ-ಶ್ರೇಯಸ್ಸಿಗಾಗಿಯೇ ಹುಟ್ಟಿಕೊಂಡ ಸಮಾಜವಾದ-ಸಮತಾವಾದದ ಸೈದ್ಧಾಂತಿಕ ನೆಲಗಟ್ಟಿನ ಮೇಲೆ ಹೋರಾಟದತ್ತ ಮುನ್ನಡೆಯಬೇಕಾಗಿದೆ. ಏಕೆಂದರೆ "ನಮ್ಮ ಉದ್ಧಾರ ನಮ್ಮಿಂದ ಮಾತ್ರ ಸಾಧ್ಯವೇ ಹೊರತು ಬೇರೆಯವರಿಂದಲ್ಲ" ಎಂಬ ಅಂಬೇಡ್ಕರ್‌ರವರ ಕಟು ಸತ್ಯಮಾತನ್ನು ಮರೆಯಲಾಗದು. ನಮ್ಮ ಹೃದಯದಾಳದ ನೋವನ್ನ ಕಂಡಿದ್ದ ಅಂತಹ ಧೀಮಂತ ನಾಯಕ ನಮ್ಮಿಂದ ದೂರವಾಗಿ ಈಗ 24 ವರ್ಷಗಳೇ ತುಂಬುತ್ತಿವೆ, ಈ ಸಂದರ್ಭದಲ್ಲಿ ಅವರ ಉದಾತ್ತ ವಿಚಾರಗಳು ಮತ್ತು ಕ್ರಾಂತಿಕಾರಿ ಧೋರಣೆಗಳತ್ತ ಹೆಜ್ಜೆ ಇಡೋಣ.

—ಸಂ.

ರಾಜ್ಯಾದ್ಯಂತ ಮತ್ತೆ ಸಮುದಾಯ ಸಾಂಸ್ಕೃತಿಕ ಜಾಥಾ

ರಾಜ್ಯದ ನೂರಾರು ಹಳ್ಳಿಗಳಲ್ಲಿ ಕಳೆದ ವರ್ಷದ ಅಕ್ಟೋಬರ್-ನವೆಂಬರ್‌ನಲ್ಲಿ ಸಾಂಸ್ಕೃತಿಕ ಜಾಥಾ ನಡೆಸಿ ಜನತೆಯಲ್ಲಿ ಸಾಕಷ್ಟು ಜಾಗೃತಿ ಉಂಟುಮಾಡಿದ 'ಸಮುದಾಯ' ಈಗ ಮತ್ತೊಂದು ಜಾಥಾಕ್ಕೆ ಸಿದ್ಧವಾಗಿದೆ.

ಮುಂದಿನ ವರ್ಷದ ಜನವರಿ 15 ರಿಂದ 31ರ ವರೆಗೆ ಬೆಂಗಳೂರು, ಕೋಲಾರ, ಶಿವಮೊಗ್ಗ, ಧಾರವಾಡ, ಬೆಳಗಾವಿ, ಬಿಜಾಪುರ, ರಾಯಚೂರು, ಬಳ್ಳಾರಿ ಮತ್ತು ಬೀದರ್ ಜಿಲ್ಲೆಗಳ ಹಳ್ಳಿಹಳ್ಳಿಗಳಲ್ಲಿ ಆಯಾ ಜಿಲ್ಲಾ ಸಂಘಟನೆಗಳು ಜಾಥಾ ನಡೆಸಿ ದಲಿತರ, ಶೋಷಿತರ ಮತ್ತು ಕಾರ್ಮಿಕರ ಮೇಲಿನ ಶೋಷಣೆಯನ್ನೂ ಬಿಚ್ಚಿ ಹೇಳುವ ನಾಟಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರದರ್ಶಿಸಲಿವೆ.

ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ಅಲ್ಲಲ್ಲಿ ಜನಜಾಗೃತಿ ಸಭೆಗಳು ನಡೆಯಲಿವೆ ಈ ಜಾಥಾವನ್ನು ಸಮುದಾಯ ವ್ಯವಸ್ಥೆಗೊಳಿಸುತ್ತಿದೆಯಾದರೂ ಪ್ರಗತಿಪರ ಸಂಘಟನೆಗಳು, ವಿಚಾರವಂತರು ಮತ್ತು ಬರಹಗಾರರು ಪಾಲ್ಗೊಳ್ಳಲು ಅವಕಾಶವಿದೆ.

ಈ ಬಾರಿಯ ಜಾಥಾದ ವಿಶೇಷವೆಂದರೆ ಸಾಂಸ್ಕೃತಿಕ ಕಾರ್ಯಕ್ರಮದ ಜೊತೆಗೆ ಅಲ್ಲಲ್ಲಿ ಸಂಚಾರಿ ಪುಸ್ತಕ ಪ್ರದರ್ಶನ.

ಹಸಿವು ಮತ್ತು ಬಡತನದ

ಲ್ಯಾಟಿನ್ ಅಮೆರಿಕದ 16ನೇ ಆಹಾರ ಮತ್ತು ಕೃಷಿ ವ್ಯವಸ್ಥೆಯ ಪ್ರಾದೇಶಿಕ ಸಮ್ಮೇಳನವನ್ನು ಇತ್ತೀಚೆಗೆ ಕಮ್ಯುನಿಸ್ಟ್ ರಾಷ್ಟ್ರ ಕ್ಯೂಬಾದ ಅಧ್ಯಕ್ಷ ಫಿಡಲ್ ಕಾಸ್ಟ್ರೋ ಅವರು ಉದ್ದೇಶಿಸಿ ಮಾಡಿದ ಭಾಷಣದ ಸಾರಾಂಶ.

—ಪ್ರಿಯ ಕಾಮ್ರೇಡುಗಳೆ,

ಐದು ವರ್ಷಗಳ ಹಿಂದೆ ರೋಮ್‌ನಲ್ಲಿ ನಡೆದ ವಿಶ್ವಆಹಾರ ಸಮ್ಮೇಳನದಲ್ಲಿ ಜಗತ್ತಿನ ಪ್ರತಿನಿಧಿಗಳೆಲ್ಲ ಸೇರಿದ್ದರು. ಮಾನವ ಸಮುದಾಯದ ಆಹಾರ ಸಮಸ್ಯೆಗಳನ್ನು ಬಗೆಹರಿಸಬೇಕಾದ ತುರ್ತಿನ ಅಗತ್ಯವನ್ನು ಅಲ್ಲಿ ಮುಂದಿಡಲಾಯಿತು. ಆದರೆ ಅಮೆರಿಕ ಮುಂತಾದ ಮುಂದುವರೆದ ದೇಶಗಳು ರಾಜಕೀಯ, ತಾಂತ್ರಿಕ ಕಾರಣಗಳಿಗಾಗಿ ಈಗಾಗಲೇ ಬದ್ಧವಾಗಿರುವ ಜಿಪುಣತನದ ಬಗ್ಗೆ ಕೊಂಚ ನಿರಾಶೆ ಭಾವನೆಯೂ ಅಲ್ಲಿತ್ತು. ತಮ್ಮ ಹೆಚ್ಚುವರಿ ಸಂಪತ್ತನ್ನು ಜಗತ್ತಿನ ಹಸಿವನ್ನು ನೀಗಲು ಈ ಅಭಿವೃದ್ಧಿ ಹೊಂದಿರುವ ದೇಶಗಳು ಸಾಮೂಹಿಕವಾಗಿ ತೊಡಗಿಸಿದರೆ, ಅನೇಕ ದೇಶಗಳಲ್ಲಿ, ಅದರಲ್ಲೂ ಮೂರನೇ ಜಗತ್ತಿನಲ್ಲಿ ಇರುವ ಪೌಷ್ಟಿಕಾಂಶದ ಕೊರತೆಯ ತೀವ್ರ ಸಮಸ್ಯೆಯನ್ನು ಪರಿಹರಿಸಬಹುದಾಗಿತ್ತು.

ದುರಾದೃಷ್ಟದಿಂದ ಹಸಿವು ಇನ್ನೂ ನಮ್ಮ ಜೊತೆಗಿದೆ. ಹಿಂದೊಮ್ಮೆ ಯೂರೋಪು ಮುಂತಾದ ಭಾಗಗಳಲ್ಲಿ ತಲೆದೋರಿದ ವಿನಾಶಕಾರಿ ಮತ್ತು ನಾಟಕೀಯ ರೂಪದಲ್ಲಿ ಅಲ್ಲದಿದ್ದರೂ ಹೆಚ್ಚು ವ್ಯವಸ್ಥಿತವಾಗಿ, ನೂರಾರು ಮಿಲಿಯನ್ ಗಂಡಸರು ಮತ್ತು ಹೆಂಗಸರನ್ನು ಅದು ತಟ್ಟುತ್ತಿದೆ.

ವಿಶ್ವ ಆಹಾರ ಸಮ್ಮೇಳನ ನಡೆದಾಗ ಜಗತ್ತಿನಲ್ಲಿ 450 ಮಿಲಿಯನ್ ಜನರು ಹಸಿವಿನ ಆಧುನಿಕ ರೂಪವಾದ ಪೌಷ್ಟಿಕಾಂಶದ ಕೊರತೆಯಿಂದ ನರಳುತ್ತಿದ್ದಾರೆಂದು ಅಂದಾಜು ಮಾಡಿತ್ತು.

ಬೇಸಾಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ಬೇಕಾದಷ್ಟು ತಾಂತ್ರಿಕ ಸಾಧನೆಗಳು ಆಗಿವೆ ಹಸಿರು ಕ್ರಾಂತಿ ಭರವಸೆಯನ್ನು ತಂದಿತ್ತು. ಹೊಸಬೆಳೆ ಮಾದರಿಗಳು, ಹೆಚ್ಚು ಪರಿಣಾಮಕಾರಿ ಕೀಟನಾಶಕಗಳು, ಫಲವತ್ತಿಕೆಯ ವೈಜ್ಞಾನಿಕ ಕ್ರಮಗಳು, ನೀರಾವರಿಯ ಹೊಸ ಕ್ರಮಗಳು ಇವೆಲ್ಲ ಬಂದಿವೆ ಆದರೆ ಹಸಿವು ಇನ್ನೂ ಉಳಿದಿದೆ. ಏಕೆಂದರೆ ಹಸಿವು ಬಡತನದ ಒಂದು ಅಂಗ. ಅನಭಿವೃದ್ಧಿ ಸ್ಥಿತಿಯಲ್ಲಿ ಬಡತನದ ಮತ್ತು ಹಸಿವುಗಳು ಕೈಕೈ ಹಿಡಿದು ಸಾಗುತ್ತವೆ ಎಂಬುದನ್ನು ನಾನಿಲ್ಲಿ ಹೇಳಬೇಕು,

ಹೀಗಾಗಿ ಪ್ರತಿ ಬಾರಿ ನಾವು ಆಹಾರ ಮತ್ತು ಕೃಷಿಯ ವಿಶ್ವ ಸಮಸ್ಯೆಗಳ ಬಗ್ಗೆ ವಿಶ್ಲೇಷಿಸಲು ಸಂಧಿಸಿದಾಗಲೂ ಅನಿವಾರ್ಯವಾದ ಮತ್ತು ಭಾರವಾದ ಅಭಿವೃದ್ಧಿಯ ಪ್ರಶ್ನೆ ಎದ್ದೇಳುತ್ತವೆ. ಲ್ಯಾಟಿನ್ ಅಮೆರಿಕಾ ಈ ಚಾರಿತ್ರಿಕ ಬಂಧಕ್ಕೆ ಅಪವಾದವಲ್ಲ. ಅದರ ಗ್ರಾಮೀಣ ಜನತೆಯ ಶೇ.40ರಷ್ಟು ಭಾಗ ಬಡತನದಲ್ಲಿದೆಯೆಂದು ವಿಶ್ವಬ್ಯಾಂಕ್ ಅಂದಾಜು ಮಾಡಿತ್ತು. ಲ್ಯಾಟಿನ್ ಅಮೆರಿಕದ ಅಸ್ಥಿರ ನಗರ ಆರ್ಥಿಕತೆಯಿಂದ, ಗ್ರಾಮೀಣ ನಿರುದ್ಯೋಗದ ದೊಡ್ಡ ದುರಂತವನ್ನು ತಪ್ಪಿಸಲಾಗಿದೆ.

ಕೃಷಿ ಹಿಂದುಳಿದಿರುವಿಕೆ ಮಾತ್ರ ಬಡತನ ತರುವುದಿಲ್ಲ ಪೌಷ್ಟಿಕಾಂಶದ ಪರಿಧಿಯೊಳಗೇ ನಿಲ್ಲಲು ನಮ್ಮಂಥ ದೇಶಗಳು ಬೇರೆ ದೇಶಗಳಿಂದ ಅಪಾರ ಆಹಾರಧಾನ್ಯವನ್ನು ಆಮದು ಮಾಡಿಕೊಳ್ಳಬೇಕಾಗುತ್ತದೆ. ಇದರಿಂದ ಹಣಪಾವತಿಯಲ್ಲಿ ಅಸಮತೆ ತಲೆದೋರಿ ಈ ದೇಶಗಳು ವಿನಾಶದ ಅಂಚಿನಲ್ಲಿ ಬಂದು ನಿಲ್ಲುತ್ತವೆ.

ಪ್ರತಿ ಐದು ದಿನಗಳಲ್ಲಿ ಜಗತ್ತಿನ ಜನಸಂಖ್ಯೆ ಒಂದು ಮಿಲಿಯನ್ ಹೆಚ್ಚಾಗುತ್ತದೆ. ಇದ ಶೇ.90ರಷ್ಟು ಭಾಗ ಅನಭಿವೃದ್ಧಿ ದೇಶಗ ಆಹಾರ ಉತ್ಪಾದನೆ ಕಡಿಮೆ ಇರುವ ದೇಶಗ ಈಗ ಈ ಜಗತ್ತಿನ ಜನಸಂಖ್ಯೆ 4300 ಮಿಲಿ ಯನ್ ಮುಟ್ಟಿದೆ. ಮುಂದಿನ 20 ವರ್ಷಗ ಇದು 6400 ಮಿಲಿಯನ್ ಆಗುತ್ತದೆ. ಇ ಶೇ 80ರ ಭಾಗ ಎಂದರೆ 5000 ಮಿಲಿಯ ಜನ ಮೂರನೇ ಜಗತ್ತಿನಲ್ಲಿ ವಾಸಿಸುತ್ತಾರೆ.

ಅನಭಿವೃದ್ಧಿ ದೇಶಗಳ ಮಕ್ಕಳಲ್ಲಿ ಪ್ರತಿ ವರ್ಷ 25 ಮಿಲಿಯನ್ ಮಕ್ಕಳು ಹಸಿವು ಮತ್ತು ಪೌ ಆಹಾರದ ಕೊರತೆಯಿಂದ ತಮ್ಮ ಐದನೇ ಹು ಹಬ್ಬಕ್ಕೆ ಮುಂಚೆ ಸಾಯುತ್ತಾರೆ.

ದಲಿತರು ಮತ್ತು

ಇಂಡಿಯಾದ ಇಡೀ ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆ ಅನಾರೋಗ್ಯಕರ ಪರಿಸ್ಥಿತಿ, ದಲಿತರ ಉದ್ಧಾರದ ಮಾತು, ದಿನಕಳೆದಂತೆ ಪೂರ್ಣ ಹುಸಿಯಾಗಿ ಮಾರ್ಪಡುತ್ತಿದೆ ಸ್ವಾತಂತ್ರ್ಯ ಸಿಗುವುದಕ್ಕೆ ಮೊದಲು ಮತ್ತು ನಂತರದ ಸಮಾಜ ಪರಿಸರದಲ್ಲಿ ದಲಿತರನ್ನು ಕುರಿತಂತೆ ಗಮನಾರ್ಹ ಬದಲಾವಣೆಗಳಾದ ಬಗ್ಗೆ ನಮಗೆ ಎಲ್ಲೂ ಸಾಕ್ಷಿ ಸಿಕ್ಕುವುದಿಲ್ಲ. ಬಂಡವಾಳಶಾಹಿ ಹಾಗೂ ಸಾಮ್ರಾಜ್ಯಶಾಹಿಯನ್ನು ಅತ್ಯಂತ ಸ್ತುತಿವಾತ್ಸಲ್ಯಗಳಿಂದ ನೋಡುವ ನಮ್ಮ ಚರಿತ್ರೆಕಾರರೇ ಒದಗಿಸುವ ಹಲವಾರು ಸಾಕ್ಷ್ಯಗಳು ಇದಕ್ಕೆ ಆಧಾರವಾಗಿದೆ,

ಸಂವಿಧಾನದತ್ತವಾಗಿ ದಲಿತರಿಗೆ ಸಿಕ್ಕಬೇಕಾದ ಸವಲತ್ತುಗಳು ಸರ್ಕಾರದ ದಲಿತರ ನಡುವಿನ ಮಧ್ಯವರ್ತಿಗಳು ಒಂದಲ್ಲ ಒಂದು ರೀತಿಯಲ್ಲಿ ಸರ್ಕಾರಿ ಕೃಪ ಪೋಷಿತ ನಾಟಕ ಮಂಡಳಿಯ ಪಾತ್ರಧಾರಿಗಳಾಗಿರುವುದು-ಪ್ರಜ್ಞಾವಂತರ ಗಮನಕ್ಕೆ ಬಾರದೆ ಹೋದದೇನೂ ಅಲ್ಲ. ಆದರೆ

ಮಾನಸಿಕವಾಗಿ ಗುಲಾಮರಾಗಿ ಬಾಳುವ ಕಾರಶಾಹಿ, ಇದನ್ನೆ ಬಂಡವಾಳ ಮಾಡಿಕೊಂ ಬೀಗುವ ಬಂಡವಾಳಶಾಹಿ ಹಾಗೂ ಜ ನ್ದಾರಿ ರಾಜಕಾರಣಿಗಳು ಈ ಸತ್ಯ ತುಂಬಾ ಸೂಕ್ಷ್ಮವಾಗಿ ದಲಿತರ ಬಳಿ ಕೂ ಸುಳಿಯದಂತೆ ಮಾಡುತ್ತಿರುವುದು ಪ್ರಗತಿ ಶಕ್ತಿಯನ್ನು ಕಾಡಿಸುತ್ತಿರುವ ಅಂಶ

ಸವಲತ್ತುಗಳನ್ನು ಕಬಳಿಸುವ ಮಧ್ಯವರ್ತಿ ಪಟ್ಟಿಯಲ್ಲಿ ದಲಿತ ಮುಖಂಡರೇ ಮುಂದಿರು ದನ್ನು ಗಮನದಲ್ಲಿಟ್ಟುಕೊಂಡು, ಈ ಸಂಬಂ ವಾಗಿ ಚರ್ಚಿಸಬೇಕಾದ್ದು ಇಲ್ಲಿ ಅನಿವಾಯ ಹುಟ್ಟಿನೊಂದಿಗೇ, ಮಾನಸಿಕ ಕ್ಲೇಶಗಳ ಮೈಗೂಡಿಸಿಕೊಂಡು ಬೆಳೆಸುವ ಮತ್ತು ನಂ ಕೂಡಾ ಅವುಗಳನ್ನು ಬದುಕಿನಲ್ಲಿ ಪಾಲ ತರುವ ಸಮಣ್ಯೆಯನೊಬ್ಬ ದಲಿತರ ಸವಲ ಗಳನ್ನು ಕಿತ್ತುಕೊಳ್ಳುವುದಕ್ಕಿಂತ ದಲಿತರ ಹೆಸ ಮುಂದೆ ಒಂದಾಗ ಮಾಡುವ ಈ "ಕಬಳಿಸು ಕೆಲಸ" ಅತ್ಯಂತ ನಾಚಿಕೆಗೇಡಿನದು ಹಾಗ

...ದ್ಧ ಸಮರಕ್ಕೆ ಕ್ಯಾಸ್ಟ್ರೋ ಕರೆ



...ಮತ್ತು ಅನಿಲದ ಬೆಲೆ ಹೆಚ್ಚುತ್ತಿರುವುದ
...ರಾಸಾಯನಿಕ ಮತ್ತು ಕೀಟನಾಶಕಗಳ
...ಹೆಚ್ಚುತ್ತದೆ. ತೈಲ ಉತ್ಪಾದಿಸದ

ಅನಭಿವೃದ್ಧಿ ದೇಶಗಳಿಗೆ ಇದರಿಂದ ಇನ್ನಷ್ಟು ಕಷ್ಟಗಳು ಬರುತ್ತದೆ. ಆಹಾರದ ಬೆಲೆಗಳು ಮುಂದಿನ 20 ವರ್ಷಗಳಲ್ಲಿ ಎರಡರಷ್ಟಾಗುತ್ತದೆ.

ಅಭಿವೃದ್ಧಿ ಪಡೆದ ಮತ್ತು ಅನಭಿವೃದ್ಧಿ ದೇಶಗಳ ನಡುವೆ ಇರುವ ಅಂತರ ನಾಚಿಕೆ ತರುವಷ್ಟಿದೆ. ವರ್ಷವರ್ಷಕ್ಕೆ ಅದು ಹೆಚ್ಚುತ್ತದೆ. ಈ ವಾಸ್ತವವನ್ನು ಗಮನಿಸಿ ನಾವು ಹೋರಾಡಲು ಇನ್ನಷ್ಟು ದೃಢ ನಿರ್ಧಾರ ಕೈಗೊಳ್ಳಬೇಕು.

ನಮ್ಮಲ್ಲಿನ ಪ್ರತಿಯೊಂದು ದೇಶಕ್ಕೂ ಕೃಷಿ ಸುಧಾರಣೆ ತುಂಬ ಅವಶ್ಯಕ. ಸಾಮಾಜಿಕ ನ್ಯಾಯವಿಲ್ಲದೆ ಹಸಿವು ಮತ್ತು ಬಡತನವನ್ನು ಹೋರಾಡಿ ಗೆಲ್ಲುವುದು ಸಾಧ್ಯವಿಲ್ಲ. ಸಣ್ಣ ಹಿಡುವಳಿಗಳು ಮತ್ತು ಚಿಕ್ಕ ಬೇಸಾಯ ತುಂಬಾ ಅನುತ್ಪಾದನೀಯ. ಸಾಮಾಜಿಕವಾಗಿ ನ್ಯಾಯಬದ್ಧವಾದ ಮತ್ತು ಸಮರ್ಥ ಉತ್ಪಾದನೆ ಮತ್ತು ವಿತರಣೆ ವಿಧಾನಗಳುಳ್ಳ ದೊಡ್ಡ ಹಿಡುವಳಿ ಈಗ ಅಗತ್ಯವಾಗಿದೆ.

ಕೃಷಿ ಸುಧಾರಣೆ ಕೇವಲ ಒಂದು ಹೆಜ್ಜೆ ಎಂಬುದನ್ನು ಅನುಭವ ತೋರಿಸಿಕೊಟ್ಟಿದೆ. ಯಾಂತ್ರೀಕರಣ ಮತ್ತು ರಾಸಾಯನಿಕಗಳಿಲ್ಲದೆ ಕೃಷಿ ಉತ್ಪಾದನೆ ಹೆಚ್ಚುವುದಿಲ್ಲ.

ಸಾಮಾನ್ಯ ಬೆಳವಣಿಗೆ ಸಮಸ್ಯೆಯಾಗಿ ಬೇಸಾಯ ಕಾಣುವುದು ಇಲ್ಲಿಯೇ. ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ದಾರಿಯಲ್ಲಿ ನಾವು ಎದುರಿಸುವ ಪ್ರಶ್ನೆಗಳು ಅನೇಕ.

ಕಳೆದ ವರ್ಷ, ಅಲಿಪ್ತ ಚಳುವಳಿ ದೇಶಗಳ ಪರವಾಗಿ ನಾನು ವಿಶ್ವಸಂಸ್ಥೆಯಲ್ಲಿ ಮಾತನಾಡಿದಾಗ, ಬೆಳವಣಿಗೆಯ ಸಮಸ್ಯೆಗಳನ್ನು ಅದರಲ್ಲೂ ಕೃಷಿಯನ್ನು ಕುರಿತು ಪ್ರಸ್ತಾಪಿಸಿದ್ದೆ. ಈಗ

(8ನೇ ಪುಟ ನೋಡಿ)

...ಯ ನಿಜ ಸ್ವರೂಪಗಳು

ವಿಶೇಷ ಲೇಖನ

...ಮಾಡುದು. ಈ ಹಿನ್ನೆಲೆಯಲ್ಲಿ ಸವಲತ್ತು ... ಜೀವನದ ಉಸಿರಾಗಿಸಿಕೊಂಡಿರುವ ... ಅವುಗಳನ್ನು ಪಡೆಯುವುದನ್ನೇ ತಪ್ಪು...ಟದ ಗುರಿಯನ್ನಾಗಿ ಮಾಡಿಕೊಂಡಿರುವ ...ಮುಖಂಡರ ಬಗ್ಗೆ ಕೂಡ ಯೋಚಿಸ...ತ್ತದೆ.

...ಇಂದೂಧರ ಹೊನ್ನಾಪುರ

...ರು ತತ್ವಗಳನ್ನು ಮಾತ್ರ ಮೈಗೂಡಿಸಿ...ವ ನಮ್ಮ ಹಿಂದೂ ಸಮಾಜ, ಅದರ ...ನ್ನೇ ಉದ್ಧಾರದ ಭಜನೆ ಮಾಡುವ ...ಣೆಗಳು, ಸಮಾಜ ಸುಧಾರಣೆ ... ಸೇವೆ ಮಾಡಲು ಹಾತೊರೆಯುವ ...ಶಾಹಿಗಳು-ದೇಶಭಕ್ತರು-ದೇವಮಾನ...ತ್ಯಾದಿ ರಾಕ್ಷಸರ ನಡುವೆ ದಲಿತ ... ಪ್ರಜ್ಞಾಶೂನ್ಯವಾಗಿ, ಬದುಕುತ್ತಿದೆ. ...ಬದುಕಿನ ಬಗ್ಗೆ, ವ್ಯವಸ್ಥೆಯ ಕರಾಳ ಕೃತ್ಯಗಳ ಬಗ್ಗೆ, ಚೂರೂ ಜ್ಞಾನ ಬೆಳೆಸಿಕೊಳ್ಳುವಂತೆ ಈ ರಾಕ್ಷಸರು ದಲಿತರ ಮನಸ್ಸನ್ನು ಕಬಳಿಸಿದ್ದಾರೆ. ಸ್ವಾಭಿಮಾನ - ಸ್ವಾತಂತ್ರ್ಯಕ್ಕಾಗಿ ದುಡಿಯುವ ಅವರ ಉತ್ಕಟ ಆಸೆ-ಆಕಾಂಕ್ಷೆಗಳನ್ನು ಕಡೆಗಣಿಸಿ ಅವರನ್ನು ದೈಹಿಕ ದಾಸ್ಯಕ್ಕೆ, ಹಾಗೂ ತಮ್ಮ ವೈಭವಗಳಿಗೆ ಮಾತ್ರ ಸೀಮಿತಗೊಳಿಸಿದ್ದಾರೆ.

ಇವು ಉದ್ವೇಗದ ಮಾತುಗಳಾಗಿ ಕೆಲವರಿಗೆ ಕಾಣಬಹುದು. ಆದರೆ ಸ್ವಾತಂತ್ರ್ಯ ನಂತರದ ಇಂದಿನ ದಿನ ಕೂಡ ದಲಿತರು ಮಲ ಹೊರುತ್ತಾರೆಂಬ ಸತ್ಯ, ಹಾಗೂ ಅದರ ಹಿಂದಿನ ಅಮಾನವೀಯ ವ್ಯವಸ್ಥೆಯನ್ನು ಅರಿತವರು ಅರಿಯಬೇಕು. ಸಾಮಾಜಿಕ ಮೌಲ್ಯಕ್ಕಾಗಿ ಹಾತೊರೆಯುವ ಅದರೊಂದಿಗೆ ಎರಡು ಹೊತ್ತಿನ ಕೂಳಿಗಾಗಿ ದುಡಿಯುವ, ತಮ್ಮ ಇಡೀ ಭವಿಷ್ಯವನ್ನು ಜೀತದಲ್ಲೇ ಕಳೆಯುವ, ಕೋಟಿ ಕೋಟಿ ಹಸಿದ ಕಣ್ಣುಗಳ ಬೀಭತ್ಸ ಮೌನಕ್ಕೆ ಉತ್ತರಿಸಬೇಕು. ಸಾಮಾಜಿಕ 'ಅಂತಸ್ತು'ಗಳ ಹೋರಾಟದಲ್ಲಿ ದಲಿತರಿಗೆ ಒಂದಲ್ಲ ಒಂದು ಘಟ್ಟದಲ್ಲಿ ಸೋಲು ಈಗ ಕಟ್ಟಿಟ್ಟ ಬುತ್ತಿ. ಕೇವಲ ಆರ್ಥಿಕ ಬದಲಾವಣೆಯಿಂದ ಮಾತ್ರ 'ಸರ್ವ ಸಮಾನತೆ' ಅನ್ನುವ ಮಾತು ಭಾರತದ ಹಾಲಿ ಸಂದರ್ಭದಲ್ಲಿ ಎಷ್ಟರ ಮಟ್ಟಿಗೆ ನಿಜ ಅನ್ನುವ ಬಗ್ಗೆ ಬಹಳ ಗುಮಾನಿಗಳು ಇವೆ.

ಸಮಾಜ ಬದಲಾವಣೆ ಕುರಿತು ಮಾತಾಡುವ ಎಲ್ಲಾ ಪ್ರಗತಿಪರ ಶಕ್ತಿಗಳೂ ವಿಶೇಷವಾಗಿ ಎಡ ಪಂಥೀಯ ರಾಜಕೀಯ ಶಕ್ತಿಗಳು ಯಾವ ತಾತ್ವಿಕ ಆಧಾರದ ಮೇಲೆ ಜಾತಿಯ ಪಿಡುಗಿನ ವಿರುದ್ಧ ದನಿ ಎತ್ತಿಲ್ಲವೋ ಕಾಣೆ. ಹೀಗೆಂದಾಕ್ಷಣ ನನ್ನ ಕಮ್ಯುನಿಸ್ಟ್ ಮಿತ್ರರ ಕಣ್ಣು ಕೆಂಪಾಗುವುದೆಂದು ನನಗೆ ಗೊತ್ತು. ಆದರೆ ನನ್ನ ಮಟ್ಟಿಗೆ ಇದು ಅಗತ್ಯ. ದುಡಿಯುವ ಬಹುತೇಕ ಮಂದಿ ಹಾಗೂ ಹೋರಾಟದ ಮುಂಚೂಣಿಯಲ್ಲಿರಬೇಕಾದ ಜನಕ್ಕೆ ಕನಿಷ್ಠ ಪ್ರಜ್ಞೆ ಮೂಡಿ

(6ನೇ ಪುಟನೋಡಿ)

ದಲಿತರು ಮತ್ತು ವ್ಯವಸ್ಥೆಯ ನಿಜ ಸ್ವರೂಪಗಳು

(ಮಧ್ಯದ ಪುಟದಿಂದ)

ಸುವ ಕೆಲಸವನ್ನು ಕೂಡ ಇನ್ನೂ ನಮ್ಮ ಕಮ್ಯು ನಿಸ್ಟ್ ಮಿತ್ರರು ಮಾಡಿಲ್ಲ. ದುಡಿಯುವ ಜನ ಅಂದಾಕ್ಷಣ ಪಟ್ಟಣದ ಕಾರ್ಮಿಕರ ಬಳಿ ಓಡುವ, ಸಾವಿರಾರು ಪುಟದ ಇಂಗ್ಲೀಷ್ ಪುಸ್ತಕಗಳ ಸಿದ್ಧಾಂತವನ್ನು ಭಾರತ ಸಮಾಜದ ಮೇಲೆ ಕಾಪಿ ಮಾಡಬೇಕೆಂದು ಚಡಪಡಿಸುವ ನಮ್ಮ ಕಮ್ಯುನಿಷ್ಟರು ನಮ್ಮದೇ ನಾಡಿನ ಪೂರ್ಣ ಪರಿಚಯ ಪಡೆಯುವಲ್ಲಿ ನಮ್ಮ ಸಮಸ್ಯೆಗಳನ್ನು ಅರಿಯುವಲ್ಲಿ ಈವರೆಗೂ ವಿಫಲರಾಗಿಯೇ ಇದ್ದಾರೆಂಬ ಸಮಾಜವಾದಿಗಳ ಮಾತಿನಲ್ಲಿ ಸತ್ಯಾಂಶ ವಿಲ್ಲದಿಲ್ಲ.

ಸುಲಿಗೆಯನ್ನೇ ಬಂಡವಾಳ ಮಾಡಿಕೊಂಡ ಇಂಡಿಯಾದ ಕಾಂಗ್ರೆಸ್ ಸಂಸ್ಕೃತಿ, ಹಾಗೂ ಅಜ್ಞಾನದಿಂದ ಅದನ್ನು ಬೆಳೆಸುತ್ತಲೇ ಬಂದ ದಲಿತರು ಈ ನಡುವಿನ ವಿರೋಧಾಭಾಸದ ಅರಿವು ದಲಿತರಲ್ಲಿ ಮೂಡಬೇಕು. ಸಾಮಾಜಿಕ ಅಧೋಗತಿಗೆ ಕಾರಣವಾದ ವೈಧಿಕ ಸಂಸ್ಕೃತಿಯನ್ನು ಧಿಕ್ಕರಿಸುವುದರೊಂದಿಗೆ ಕಾಂಗ್ರೆಸ್ ಸಂಸ್ಕೃತಿಯನ್ನು ದಲಿತರು ಧಿಕ್ಕರಿಸಬೇಕಾಗಿದೆ. ಕಾಂಗ್ರೆಸ್ ಸಂಸ್ಕೃತಿ ಆರೆಸ್ಸೆಸ್ ಸಂಸ್ಕೃತಿದಿಂತ ತೀರ ಭಿನ್ನವಾದದ್ದೇನಲ್ಲ ಗೊಡ್ಡು ಆದರ್ಶ, ಸಂಬಂಧವಿಲ್ಲದ ಕಲ್ಪನೆಗಳು, ಇಲ್ಲದ ಶಕ್ತಿಯ ಹೆಸರಲ್ಲಿ ಬದುಕನ್ನು ಬಸುರು ಮಾಡುವ ಷಂಡತನ-ಈ ಎಲ್ಲವೂ ನಮ್ಮ ವೈಧಿಕ ಸಂಸ್ಕೃತಿಯ ಕೊಡುಗೆಗಳು. ಇವುಗಳ ಬಗ್ಗೆ ಇಡೀ ದಲಿತ ಜನಾಂಗ ಎಚ್ಚರ ವಹಿಸಬೇಕಾಗಿದೆ ಕಾಂಗ್ರೆಸ್ ಸಂಸ್ಕೃತಿಯ ಸವಲತ್ತುಗಳು-ಮೀಸಲಾತಿಗಳು ಕೊಂಚ ಮಟ್ಟಿಗೆ ದಲಿತರಲ್ಲಿ ಸ್ವಾಭಿಮಾನದ ಸೆಲೆಯೊಡೆಯಲು ಕಾರಣವಾಗಿದ್ದರೂ ಅದರಿಂದ ದಲಿತರ ಏಳಿಗೆ ಖಂಡಿತ ಸಾಧ್ಯವಿಲ್ಲ. ಕಾಂಗ್ರೆಸ್ ಸಂಸ್ಕೃತಿಯ ಹಿನ್ನೆಲೆಯಲ್ಲಿ ರಚಿತವಾದ ಸಂವಿಧಾನ ದಲಿತರ ಪೂರ್ಣ ಬೆಳವಣಿಗೆಯನ್ನು ಬಯಸುವುದಿಲ್ಲ, ಡಾ॥ ಅಂಬೇಡ್ಕರ್ ಸಹ ಸಂವಿಧಾನದ ಬಗ್ಗೆ ಅಸಹನೆ ತೋರಿದ್ದನ್ನು ಈ ಸಂದರ್ಭದ ನೆನೆಯಬಹುದು.

ಆಸ್ತಿಹಕ್ಕನ್ನೂ ಎತ್ತಿ ಹಿಡಿದು, ಆ ಮೂಲಕ ಊಳಿಗಮಾನ್ಯ ಪದ್ಧತಿ ಅಸ್ತಿತ್ವವನ್ನು ಎತ್ತಿ ಹಿಡಿದಿರುವ ಸಂವಿಧಾನ, ಇದರಿಂದ ನಾವು ದಲಿತೋದ್ಧಾರ ಮಾಡುತ್ತೇವೆನ್ನುವ ಜಮೀನ್ದಾರರು, ಮತ್ತು ಬಂಡವಾಳಶಾಹಿ ರಾಜಕಾರಣಿಗಳು ಈ ಯಾರಿಂದಲೂ ಸಾಮಾಜಿಕ ಸಂಘರ್ಷ ಉಂಟಾಗದು. ಸ್ವಾತಂತ್ರ್ಯ ನಂತರ ಮುವ್ವತ್ತು ವರ್ಷಗಳಲ್ಲಿ ನಮ್ಮ ಪ್ರತಿನಿಧಿಗಳಾಗುತ್ತಿರುವವರಲ್ಲಿ ಜಮೀನ್ದಾರರ ಸಂಖ್ಯೆ ಕ್ರಮೇಣ ಹೆಚ್ಚಾಗುತ್ತಲೇ ಇದೆ. ದುಡಿಯುವ ವರ್ಗವನ್ನು ಪ್ರತಿನಿಧಿಸುವ ಪ್ರತಿನಿಧಿಗಳ ಸಂಖ್ಯೆ ಮಾತ್ರ ಏರುತ್ತಲಿಲ್ಲ ಇದು ಇಂಡಿಯಾದಲ್ಲಿ ಬೆಳೆಯುತ್ತಿರುವ ಪ್ರತಿಗಾಮಿ ಶಕ್ತಿಗಳ ಸೂಚಿ.

ದುಡಿಯುವ ವರ್ಗಕ್ಕೆ ಅದರಲ್ಲೂ ಆರ್ಥಿಕ ಹಾಗೂ ಸಾಮಾಜಿಕವಾಗಿ ತುಳಿತಕ್ಕೊಳಗಾಗಿರುವ ದಲಿತ ಜನಾಂಗಕ್ಕೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ, ಶಿಕ್ಷಣ ನೀಡುವುದು ಈಗ ಅಗತ್ಯವಾಗಿದೆ. ಬಂಡವಾಳಶಾಹಿ ಹಾಗೂ ಪುರೋಹಿತಶಾಹಿ ಆದರ್ಶಗಳನ್ನೇ ತುಂಬಿಕೊಂಡ ನಮ್ಮ ಸದ್ಯದ ಶಿಕ್ಷಣ ಕಲಿತ ಕೆಲವೇ ಮಂದಿ ದಲಿತರನ್ನೂ ಕಬಳಿಸುತ್ತಿರುವುದು ನಮ್ಮೆಲ್ಲರಿಗೂ ಗೊತ್ತಿರುವುದೇ ಆಗಿದೆ. ದುಡಿಮೆಯ ಫಲ ಗೊತ್ತಿಲ್ಲದೆ ತನ್ನಲ್ಲಿರುವ ಶಕ್ತಿಯ ಅರಿವಿಲ್ಲದೆ ಇಡೀ ದುಡಿಯುವ ವರ್ಗ ಈವರೆಗೂ ಮೂಕ ಪಶುವಿನಂತಾಗಿರುವುದನ್ನು ನೋಡಿದ್ದೇವೆ. ಹೀನ ಶಕ್ತಿಗಳ ಕಪಿಮುಷ್ಠಿ ಮುಂದೆ ಶ್ರಮಜೀವಿಗಳನ್ನು ಬಿಡಿಸುವ ಹೊಣೆ ಕೂಡ ನಮ್ಮದೇ ಆಗಿದೆ.

ದಲಿತೋದ್ಧಾರದ ಜಪಮಾಡುವ ಶ್ರಮಜೀವಿಗಳಿಗೆ ಸಕಲ ಸೌಲಭ್ಯಗಳನ್ನು ಒದಗಿಸಿಕೊಡುತ್ತೇವೆನ್ನುವ ಕಾಂಗ್ರೆಸ್ ಸಂಸ್ಕೃತಿಯ ಪೊಳ್ಳುತನದ ಬಗ್ಗೆ ಜನರಲ್ಲಿ ಪ್ರಜ್ಞೆ ಮೂಡಿಸುವ ಕೆಲಸವನ್ನು ಪ್ರಜ್ಞಾವಂತ ಯುವಕರು ಮಾಡಬೇಕಾಗಿದೆ. ಜಾಗೃತರಾಗುವುದರಲ್ಲೇ ದಲಿತರ ವಿಮೋಚನೆ ಅಡಗಿದೆ ಎಂಬ ಅಂಬೇಡ್ಕರ್ ಅವರ ಆಲೋಚನೆಗೆ ಮಾಂಸಖಂಡಗಳನ್ನು ತುಂಬುವ ಕೆಲಸ ಈಗ ನಮ್ಮ ಮೇಲಿದೆ. ನಾವು ಬದುಕುತ್ತಿರುವ ಸಾಮಾಜಿಕ ಸಂದರ್ಭ, ವಿಷಮಿಸುತ್ತಿರುವ ಕ್ಷಣಗಳು, ಹೃದಯಹೀನ ಪರಿಸರ ನಿರ್ಮಿಸುತ್ತಿರುವ ವ್ಯವಸ್ಥೆ, ಉಸಿರು ಕಟ್ಟಿಸುವ ಬದುಕಿನ ಪ್ರತಿ ನಿಮಿಷಗಳು-ಈ ಎಲ್ಲವುಗಳ ಬಗ್ಗೆ ವೈಜ್ಞಾನಿಕ ತಿಳುವಳಿಕೆಯನ್ನು ಇಡೀ ಜನತೆಯ ಮಿದುಳಿಗೆ ತುಂಬುವ ಕಾರ್ಯ ನಮ್ಮ ಕೈಯಲ್ಲಿದೆ. ಕೊಳೆತ ಮಿದುಳನ್ನೂ ತೊಳೆಯುವ, ಇನ್ನೂ ಕೊಳೆಯದೇ ಇರುವ ಮಿದುಳನ್ನು ಕಾಪಾಡುವ ಹೊಣೆ ಕೂಡ ನಮ್ಮದೇ ಆಗಿದೆ.

ಅರ್ಥಪೂರ್ಣ ಸಂಸ್ಕೃತಿಯ ನಿರ್ಮಾಣಕ್ಕಾಗಿ ಜನಜಾಗೃತಿಗಾಗಿ, ವೈಜ್ಞಾನಿಕ ತಿಳುವಳಿಕೆಯನ್ನೂ ಮೂಡಿಸುವುದಕ್ಕಾಗಿ ಶ್ರಮಿಸಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಮಾವೋ ಹೇಳಿರುವಂತೆ; “ನೋಡಲು ಭಯಂಕರವಾಗಿರುವಂತೆ ಕಾಣುವ ಪ್ರತಿಗಾಮಿಗಳು ವಾಸ್ತವವಾಗಿ ಶಕ್ತಿಹೀನರಾಗಿರುತ್ತಾರೆ, ಜನಶಕ್ತಿ ಒಂದುಗೂಡಿದಾಗ ಅವರು ನಿರ್ನಾಮವಾಗಿ ಹೋಗುತ್ತಾರೆ”. ನಮ್ಮೊಳಗೂ ಇರುವ ಪ್ರತಿಗಾಮಿ ಶಕ್ತಿಗಳೂ ಸೇರಿದಂತೆ ಎಲ್ಲಾ ಪ್ರತಿಗಾಮಿ ಶಕ್ತಿಗಳ ವಿರುದ್ಧದ ಹೋರಾಟಕ್ಕೆ ವೈಜ್ಞಾನಿಕವಾಗಿ ಜನರನ್ನು ಸಜ್ಜುಗೊಳಿಸುವ, ಆ ಮೂಲಕ ನೊಂದ ಜನರ ಮನದಲ್ಲಿ ಭವಿಷ್ಯತ್ತನ್ನು ಕುರಿತು ವಿಶ್ವಾಸ ಮೂಡಿಸುವ ನಿರಂತರ ಕಾಯಕವನ್ನು ಎಲ್ಲಾ ಪ್ರಗತಿಪರರೂ ಒಂದಾಗಿ ಮಾಡಬೇಕಾಗಿದೆ. ಆಗ ಮಾತ್ರ ಬದುಕಿಗೆ ನಿಜವಾದ ಅರ್ಥ ಬರಬಲ್ಲದು.

ಭೂಮಿಗಾಗಿ ಬ್ಯಾಡಗಿಯಲ್ಲಿ ದಲಿತರ ಪ್ರದರ್ಶನ

ಧಾರವಾಡ ಜಿಲ್ಲೆಯ ಬ್ಯಾಡಗಿ ತಾ॥ ದುಮ್ಮಿಹಾಳ ಮತ್ತು ಘಾಳಪೂಜಿ ಗ್ರಾಮಗಳ ಸುಮಾರು 600 ಮಂದಿ ದಲಿತರು ನವೆಂಬರ್ 3 ರಂದು ಬ್ಯಾಡಗಿಗೆ ಮೆರವಣಿಗೆ ಹೊರಟು ತಾಲ್ಲೂಕು ಕಚೇರಿ ಮುಂದೆ ಪ್ರದರ್ಶನ ನಡೆಸಿ ಭೂಹೀನ ದಲಿತರಿಗೆ ಭೂಮಿ ಹಂಚಿಕೆ ಮತ್ತು ಸಾಗುವಳಿ ಪತ್ರಕ್ಕಾಗಿ ಒತ್ತಾಯ ಪಡಿಸಿದರು.

ನೂರಾರು ಮಹಿಳೆಯರು ಪ್ರದರ್ಶನದಲ್ಲಿ ಪಾಲ್ಗೊಂಡು ಧರಣಿ ನಡೆಸಿದರು ಅಂದು ಅಲ್ಲಿಯೆ ನಡೆದ ಬಹಿರಂಗ ಸಭೆ ಉದ್ದೇಶಿಸಿ ಬ್ಯಾಡಗಿ ಡಿಯುಸೆಸ್‌ನ ವಿ ಬಿ. ಹೀರೂರ. ಜಿ ಬಿ. ಪಾಟೀಲ, ಕಲ್ಯಾಣಿ ಮರಶಿದ್ರಳ್ಳಿ ಮತ್ತು ಭದ್ರಾವತಿ ಡಿಯುಸೆಸ್‌ನ ಶಿವಲಿಂಗಪ್ಪ ಅವರು ಮಾತನಾಡಿದರು.

ಕಾಗೋಡು ಸತ್ಯಾಗ್ರಹ: ರೈತಚಳವಳಿಗೆ ಮೊದಲ ಪಾಠ

ಾಗೋಡು ಸತ್ಯಾಗ್ರಹ : (ಗೋಪಾಲಗೌಡ ನೆನಪಿನ ಪುಸ್ತಕಗಳು-1)
ೇ—ಜಿ. ರಾಜಶೇಖರ್
್ರಕಾಶನ : ಅಕ್ಷರ ಪ್ರಕಾಶನ ಸಾಗರ, ಪುಟಗಳು-143 ಬೆಲೆ : ರೂ. 9-00

ಾಗೋಡು ಶಿವಮೊಗ್ಗ ಜಿಲ್ಲೆಯ ಸಾಗರ ಾಲ್ಲೂಕಿನ ಒಂದು ಕುಗ್ರಾಮ. ದೀವರರೇ ಈಡಿಗರು) ಹೆಚ್ಚಾಗಿರುವ ಆ ಗ್ರಾಮದಲ್ಲಿ ಈ ಶತಮಾನದ 50ರ ದಶಕದಲ್ಲಿ ಆರ್ಥಿಕ ಹೋರಾಟ ಒಂದು ನಡೆಯಿತಾದರೂ ಈವತ್ತೂ ಕೂಡ ಲ್ಲ ಕೆಳಜಾತಿಗಳನ್ನು ಕಡುಬಡತನ ಅಪ್ಪಿಕೊಂ ದೆ. ಆ ಬಡತನ ಎಷ್ಟಿದೆ ಎಂದರೆ ಲೇಖ ರೇ 1978ರ ಜೂನ್‌ನಲ್ಲಿ ಕಾಗೋಡಿಗೆ ಭೇಟಿ ತ್ತಾಗ ಕಣ್ಣಾರೆ ಕಂಡ ದೃಶ್ಯ "ದೀವರ ೇರಿಯಲ್ಲಿ, ಹರಿಜನರ ಕೇರಿಯಲ್ಲಿ ಯಾರ ನೆಗೆ ದಿನದ ಯಾವ ಹೊತ್ತಿನಲ್ಲಿ ಹೋದರು, ಡಸರು, ಹೆಂಗಸರು, ಮಕ್ಕಳು ಕಾಡಿನಿಂದ ತ್ತಂದ, ಸರಿಯಾಗಿ ಹಣ್ಣು ಕೂಡಾ ಆಗಿರದ ಲಸಿನಕಾಯಿ ತಿನ್ನುತ್ತಿದ್ದುದು ಕಾಣಿಸುತಿತ್ತು". ಬಗೆಯ ಹಸಿವು-ಬಡತನ ಆ ಜನರನ್ನು ತ್ತುತ್ತಿನ್ನುತ್ತಿರಬೇಕಾದರೆ ಈ ಮೂವತ್ತು ವರ್ಷ ಳ ಹಿಂದೆ ಆ ಹಳ್ಳಿಯಲ್ಲಿ ನಡೆದ ರೈತ ಹೋರಾ ದ ಸಾಧನೆ ಏನೇನೂ ಇಲ್ಲವೆಂಬುದನ್ನು ಷ್ಟಗೊಳಿಸುತ್ತದೆ.

ದರೂ ಕಾಗೋಡು ದೀವರರ ಹೋರಾಟ ಂದು ಚಾರಿತ್ರಿಕ ಘಟನೆಯಾದದ್ದರಿಂದ ಜಿ. ಾಜಶೇಖರ್ ಅವರ 'ಕಾಗೋಡು ಸತ್ಯಾಗ್ರಹ' ನ್ನು ಒಂದು ಐತಿಹಾಸಿಕ ಹಿನ್ನೆಲೆಯಲ್ಲಿಟ್ಟು ೋಡಬೇಕಾಗಿದೆ.

ಗೋಡಿನ ಭೂಸ್ವಾಮಿ ಗುಡುವಯ್ಯಗೌಡರ ಮೀನನ್ನು ತಲೆತಲಾಂತರದಿಂದ ಗೇಣಿಮಾಡು ದ್ದ ದೀವರರು ಗೇಣಿ ಅಳೆಯುವ ಕೊಳಗದ ಮಾಣದ ಬಗ್ಗೆ ಎತ್ತಿದ ತಕರಾರೇ ಒಂದು ುವಳಿಗೆ ಹಾದಿಯಾಯಿತು. ಇಡೀ ಕೃಷಿ ತ್ರದ ಅಶೋತ್ತರವನ್ನಲ್ಲದಿದ್ದರೂ, ಭೂಮಿಯ ಡತನ-ಸ್ವಾಧೀನದಂತಹ ಮೂಲಭೂತ ಪ್ರಶ್ನೆ ು ಈ ಹೋರಾಟದ ಹಿನ್ನೆಲೆಯಲ್ಲಿ ಎದ್ದದ್ದು ಮನಾರ್ಹ.

ೀವರರ ಸಂಘಟನೆಯೇ ಆಗಿದ್ದ ಸಾಗರ ಾಲ್ಲೂಕು ರೈತಸಂಘ ಆರಂಭದಲ್ಲಿ ಈ ಹೋರಾಟವನ್ನು ಹುಟ್ಟುಹಾಕಿತಾದರೂ ನಂತರದ ಬೆಳವಣಿಗೆಯಲ್ಲಿ ಮಲೆನಾಡು ರೈತಸಂಘ ಮತ್ತು ಸೋಷಲಿಸ್ಟರ ನಾಯಕತ್ವವನ್ನು ಅದು ಪಡೆದುಕೊಂಡುದು ಒಂದು ಗುರುತರ ಹೆಜ್ಜೆ. "ತನ್ನ ಹುಟ್ಟಿನ ಜತೆಗೇ ಸೋಲನ್ನು ಬೆನ್ನಲ್ಲೇ ಕಟ್ಟಿಕೊಂಡಿದ್ದ ಸತ್ಯಾಗ್ರಹ"ದಲ್ಲಿ ಭಾರತದಲ್ಲಿ ಸಮಾಜವಾದದ ಸಿದ್ಧಾಂತವನ್ನು ಹುಟ್ಟುಹಾಕಿದ ಲೋಹಿಯಾ ಅವರೇ ಸ್ವತಃ ಕಾಗೋಡಿಗೆ ಬಂದು ಮತ್ತು ಗೋಪಾಲಗೌಡ, ಸಿ ಜಿ ಕೆ, ರೆಡ್ಡಿ, ಖಾದ್ರಿಶಾಮಣ್ಣ, ಕಡಿದಾಳ್ ಮಂಜಪ್ಪ ಮುಂತಾದವರೂ ಪಾಲ್ಗೊಂಡು ಸತ್ಯಾಗ್ರಹವನ್ನು ಮುನ್ನಡೆಸಿದರಾದರೂ ಅದು ಏನನ್ನೂ ಸಾಧಿಸದೇ ಹೋದುದಕ್ಕೆ ಏನೇ ಬಲವತ್ತರವಾದ ಕಾರಣಗಳಿದ್ದರೂ ಸಾಮಾನ್ಯ ಜನರಲ್ಲಿ ಹೋರಾ

ಪುಸ್ತಕ ವಿಮರ್ಶೆ

ಟದ ಬಗ್ಗೆ ನಂಬಿಕೆಯನ್ನೇ ಕಳಚಿಬಿಡುತ್ತದೆ ಎಂಬುದಕ್ಕೆ ಕೆಲವು ದೀವರರೇ ಗೌಡರ ಬಳಿ ಹೋಗಿ "ಆದ್ದೇನೋ ಆಗಿಹೋಯಿತು" ಎಂದು ಒಳಗೊಳಗೇ ಮತ್ತೆ ಕೈಚಾಚಿದ ಪ್ರಸಂಗ ಸತ್ಯಾಗ್ರಹ ಸೋಲಿನ ಒಂದು ವಿಪರ್ಯಾಸ.

ಸತ್ಯಾಗ್ರಹವನ್ನು ಬಗ್ಗುಬಡಿಯಲು ಭೂಸ್ವಾಮಿಗಳ ಪಾಮೀಲುವಹಿಸಿ ಆಗಿನ ಸರ್ಕಾರ ಸತ್ಯಾಗ್ರಹಿಗಳ ಮೇಲೆ ನಡೆಸಿದ ಪೊಲೀಸ್ ಹಿಂಸಾಚಾರದ ಮತ್ತು ಜನಾಭಿಪ್ರಾಯ ರೂಪಿಸುವ ಪತ್ರಿಕೆಗಳು ಅನುಸರಿಸಿದ ಧೋರಣೆಯೂ ಹೋರಾಟದ ವಿಫಲಕ್ಕೆ ಕಾರಣವೇನೋ ಎನ್ನುವ ಅಭಿಪ್ರಾಯವನ್ನು ಒತ್ತಟ್ಟಿಗೆ ಇರಿಸಿ "ಜಮೀನ್ದಾರರಿಗೆ ಧಿಕ್ಕಾರ, ಉಳುವವನೇ ನೆಲದೊಡೆಯ" ಎಂಬ ಘೋಷಣೆಗಳು ಕಾಗೋಡಿನ ನೆಲದಲ್ಲಿ ಕೇಳಿಬಂದ ಕೆಳವರ್ಗದ ಆರ್ಥಿಕ ಹೋರಾಟವನ್ನು ನೋಡಿದರೆ ಅದನ್ನು ವ್ಯಾಪಕಗೊಳಿಸುವ ಮತ್ತು ಗಟ್ಟಿಗೊಳಿಸುವ ಅವಕಾಶವನ್ನು ಸೋಷಲಿಸ್ಟ್ ಪಕ್ಷ ಕಳೆದುಕೊಂಡದ್ದು ಆ ಪಕ್ಷದ ಸಮಾಜವಾದಿ ಕನಸಿನ ಭೋಳೆತನವನ್ನು ತೋರಿಸುತ್ತದೆ. ಇದಿಷ್ಟಾದರೂ ಕಾಲಾನುಕ್ರಮವಾಗಿ ಹೋರಾಟದ ಹಂತಗಳನ್ನು ವ್ಯಾಪಕಗೊಳಿಸುವ ಯತ್ನವನ್ನೂ ಸತ್ಯಾಗ್ರಹದ ಮುಖಂಡರು ಎಲ್ಲಿಯೂ ಪ್ರಯತ್ನಪಡದೇ ಹೋದುದೂ ಮತ್ತು ಆ ಹೋರಾಟ ಒಂದು ವೇಳೆ ತನ್ನ ಮಿತಿಯಲ್ಲಿ ಜಯಗಳಿಸಿದ್ದರೂ ಸಹ ಅದೇ ಕಾಗೋಡಿನ ಇನ್ನೊಂದು ಶೋಷಿತವರ್ಗವಾದ ಹರಿಜನರ ಸ್ಥಿತಿಗತಿಗಳು ಹೋರಾಟದ ಸಾಧನೆಯ ಸಾಚಾತನವನ್ನು ಪ್ರಶ್ನಿಸುತ್ತಿತ್ತೆಂಬುದಕ್ಕೆ ಲೇಖಕರೇ ಹೇಳುವ ಕೆಲವು ಮಾತುಗಳು ಅರ್ಥಪೂರ್ಣವಾಗಿವೆ. "ಕಾಗೋಡಿನ 14 ಹರಿಜನ ಕುಟುಂಬಗಳು ದೀವರಿಗಿಂತ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಕೆಳಗಿದ್ದರು. ಈ ಹದಿನಾಲ್ಕು ಮನೆಯ ಹರಿಜನರಿಗೆ ಸ್ವಂತದ ಜಮೀನೂ ಇರಲಿಲ್ಲ; ಗೇಣಿಯ ಜಮೀನೂ ಇರಲಿಲ್ಲ. ಇವರು ಕೂಲಿ ಕೆಲಸಮಾಡಿಕೊಂಡೇ ಬದುಕುತ್ತಿದ್ದವರು; ಇವರಲ್ಲಿ ಸುಮಾರು ಅರ್ಧದಷ್ಟು ಜನ ಗೌಡರ ಮನೆಯ ಜೀತಕ್ಕಿದ್ದವರು. ಇವರಲ್ಲಿ ಯಾರೂ ಸತ್ಯಾಗ್ರಹದಲ್ಲಿ ಒಂದು ದಿನವೂ ಭಾಗವಹಿಸಲಿಲ್ಲ ಮಾತ್ರವಲ್ಲ ಸತ್ಯಾಗ್ರಹದ ಉದ್ದಕ್ಕೂ ಇವರು ದೀವರ ವಿರುದ್ಧವೇ ಇದ್ದರು. ಸತ್ಯಾಗ್ರಹಿಗಳನ್ನು ಅಟ್ಟಿಸಿಕೊಂಡು ಹೋಗಿ ಹೊಡೆಯುವುದಕ್ಕೆ ಗೌಡರು ಈ ಹರಿಜನರನ್ನು ಬಳಸಿಕೊಂಡಿದ್ದರು. ಸತ್ಯಾಗ್ರಹಿಗಳ ವಿರುದ್ಧ ಕೋರ್ಟಿನಲ್ಲಿ ಸಾಕ್ಷಿ ಹೇಳುವುದಕ್ಕೆ ಇವರನ್ನು ಕರೆಸಿದ್ದರು. ಕಾಗೋಡಿನ ಹರಿಜನರು ಇದನ್ನು ಖುಷಿಯಿಂದ ಮಾಡದೇ ಇದ್ದಿರಬಹುದು; ಗೌಡರ ಅನ್ನದ ಹಂಗು ಇದನ್ನು ಮಾಡಿಸಿದ್ದಿರಬಹುದು. ಆದರೆ ಆ ಅನ್ನದ ಹಂಗು ದೀವರಿಗೂ ಇದ್ದಿತ್ತಲ್ಲ. ದೀವರು ಗೌಡರ ವಿರುದ್ಧ ಹೋರಾಟಕ್ಕೆ ನಿಲ್ಲಬಹುದಾಗಿದ್ದರೆ, ಹರಿಜನರು ಏಕೆ ಅವರ ಸಹಾಯಕ್ಕೆ ಬರಬಾರದಾಗಿತ್ತು; ದೀವರಿಗಿಂತಲೂ ಅವರು ಹೆಚ್ಚು ಶೋಷಿತರಾಗಿದ್ದರಲ್ಲವೆ? ಕಾಗೋಡಿನ ಹರಿಜನರನ್ನು ಒಳಗೊಳ್ಳುವಂತೆ ಸತ್ಯಾಗ್ರಹ

(8ನೇ ಪುಟ ನೋಡಿ)

ಕಾಗೋಡು ಸತ್ಯಾಗ್ರಹ : ರೈತ ಚಳುವಳಿಗೆ ಮೊದಲ ಪಾಠ

7ನೇ ಪುಟದಿಂದ)

ವನ್ನು ರೂಪಿಸುವುದು ಸೋಷಲಿಷ್ಟರಿಗೆ ಸಾಧ್ಯವಾಗಲಿಲ್ಲ. ಕಾಗೋಡು ಹರಿಜನರಂತಹ ಜನರನ್ನು ಹೋರಾಟಕ್ಕೆ ತೊಡಗಿಸುವ ಚಳುವಳಿ, ನಮ್ಮ ಕೃಷಿ ವ್ಯವಸ್ಥೆಯಲ್ಲಿಯೇ ಮೂಲಭೂತವಾದ ಬದಲಾವಣೆಗೋಸ್ಕರ ನಡೆಯಬೇಕಾಗುತ್ತದೆ; ಆಸ್ತಿಯ ಒಡೆತನವನ್ನೇ ಪ್ರಶ್ನಿಸಬೇಕಾಗುತ್ತದೆ; ಈ ಸಮಾಜದ ನ್ಯಾಯಾನ್ಯಾಯ, ಪಾಪಪುಣ್ಯದ ಕಲ್ಪನೆಗಳನ್ನೇ ಪ್ರಶ್ನಿಸಬೇಕಾಗುತ್ತದೆ. ಕಾಗೋಡು ಸತ್ಯಾಗ್ರಹ ಇಂತಹ ಮೂಲಭೂತ ಬದಲಾವಣೆಗೆ ನಡೆದ ಚಳುವಳಿ ಆಗಿರಲೇ ಇಲ್ಲ".

ಸಮಾಜದ ತೀರಾ ಕೆಳವರ್ಗಗಳನ್ನು ಒಳಗೊಳ್ಳದ ಯಾವುದೇ ಚಳುವಳಿ ಒಂದು ಬದಲಾವಣೆ ಉಂಟುಮಾಡಲು ಸಾಧ್ಯವಿಲ್ಲ ಎಂಬುದಕ್ಕೆ ಕಾಗೋಡು ಸತ್ಯಾಗ್ರಹ ಒಂದು ಒಳ್ಳೆಯ ಉದಾಹರಣೆಯಾದರೂ ಹೋರಾಟ ನಡೆಸಿದ ದೀವರರಲ್ಲಿ ತಾವೆಲ್ಲ ಒಂದೇ ಜಾತಿ, ಒಗ್ಗಟ್ಟಾದರೆ ತಾವೂ ಒಂದು ಶಕ್ತಿ ಎಂಬ ಆತ್ಮವಿಶ್ವಾಸವನ್ನು ಮೂಡಿಸಿದ್ದು ಗಮನಾರ್ಹ. ಆದ್ದರಿಂದ ದಲಿತರ-ಕೃಷಿಕಾರ್ಮಿಕರ ಬೇಡಿಕೆಗಳನ್ನು ಕಡೆಗಣಿಸಿ ರಾಜ್ಯದ ಅನೇಕ ಕಡೆ ಈಗ ನಡೆಯುತ್ತಿರುವ ಕೆಲವು ರೈತಚಳುವಳಿಗೆ "ಕಾಗೋಡು ಸತ್ಯಾಗ್ರಹ" ಮೊದಲನೆಯ ಪಾಠ ಹೇಳಿಕೊಡುತ್ತದೆ. ಈ ಸಂದರ್ಭದಲ್ಲಿ ಬಂದ ಈ ಕೃತಿ ಈಹೊತ್ತಿನಲ್ಲಿ ಒಂದು ಕೊಡುಗೆಯೇ ಹೌದು.

ನಮ್ಮ ನಾಡಿನಲ್ಲಾದ ಈ ಒಂದು ಐತಿಹಾಸಿಕ ಹೋರಾಟದ ಸೋಲು-ಗೆಲುವುಗಳನ್ನು "ಕಾಗೋಡು ಸತ್ಯಾಗ್ರಹ" ಸ್ಪಷ್ಟವಾಗಿ ಬಿಚ್ಚಿ ಹೇಳುತ್ತದೆ ಹಳ್ಳಿಯ ಬದುಕಿನ ಬಗ್ಗೆ. "ಬೆಂಗಳೂರಿನ ಯಾರೋ ಹೊಟ್ಟೆ ತುಂಬಿದ ಬೇಕೂಫರು ರೂಪಿಸಿದ ಶಿಕ್ಷಣದ ಬಗ್ಗೆ ಸತ್ಯಾಗ್ರಹದ ಉದ್ದಕ್ಕೂ ನಡೆದ ಘಟನೆ. ತೆಗೆದುಕೊಂಡ ನಿಲುವುಗಳ ಬಗ್ಗೆ ಮತ್ತು ಅದರಲ್ಲಿ ಭಾಗವಹಿಸಿದ ಕೆಲವು ಮುಖ್ಯ ವ್ಯಕ್ತಿಗಳ ಬಗ್ಗೆ ರಾಜಶೇಖರ್ ಅವರ ಖಚಿತವಾದ-ನಿಖರವಾದ ಮತ್ತು ನೇರವಾದ ಬರವಣಿಗೆಯಿಂದಾಗಿ "ಕಾಗೋಡು ಸತ್ಯಾಗ್ರಹ" ಒಂದು ಬೋರ್ ಒಡೆಯುವ ಇತಿಹಾಸ ಪುಸ್ತಕವಾಗುವ ಅಪಾಯದಿಂದ ಪಾರಾಗಿ ಕೆಳವರ್ಗಗಳ ಭವಿಷ್ಯದ ಹೋರಾಟಗಳಿಗೆ ಒಂದು ಮಾರ್ಗವಾಗಿದೆ. ಇದ ಕ್ಕಾಗಿಯೋ ಏನೋ ಈ ವರ್ಷದಲ್ಲಿ ಬಂದ ಅನೇಕ ಕೃತಿಗಳಲ್ಲಿ "ಕಾಗೋಡು ಸತ್ಯಾಗ್ರಹ" ಓದುಗರಲ್ಲಿ ಒಂದು ಅತ್ಯುತ್ತಮ ಕೃತಿಯೆನಿಸಿದೆ.

—ಎಸ್. ಗಣೇಶನ್

ಹೋರಾಟಕ್ಕೆ ಕ್ಯಾಸ್ಟ್ರೊ ಕರೆ

(ಮೊದಲ ಪುಟದಿಂದ)

ಬೆಳೆಯುತ್ತಿರುವ ದೇಶಗಳು ಕೃಷಿಗೆ ಹೆಚ್ಚು ಬಂಡವಾಳ ಹೂಡಬೇಕಾಗಿದೆ. ಮಾನವ ಜನಾಂಗವನ್ನು ಎದುರಿಸುವ ಭೀಕರ ಸಮಸ್ಯೆ ಇದು. ದೊಡ್ಡ ಸಮಸ್ಯೆಯಾದ ಶಾಂತಿಗೆ ಇದು ಸಂಬಂಧಪಟ್ಟಿದೆ. ಅಭಿವೃದ್ಧಿ ಇಲ್ಲದಿದ್ದರೆ ಶಾಂತಿ ಇಲ್ಲ.

ಅಸಮಾನ ವ್ಯಾಪಾರದ ಸಮಸ್ಯೆಗಳು ಇಲ್ಲವಾದರೆ, ಕೈಗಾರಿಕೀಕರಣಕ್ಕೊಳಗಾದ ದೇಶಗಳಿಗೆ ಬೆಳೆಯುತ್ತಿರುವ ದೇಶಗಳು ಸರಬರಾಜು ಮಾಡುತ್ತಿರುವ ಕೃಷಿಉತ್ಪನ್ನಗಳು ಮತ್ತು ಕಚ್ಚಾ ವಸ್ತುಗಳಿಗೆ ಒಳ್ಳೆಯ ಬೆಲೆಕೊಟ್ಟರೆ, ನಮ್ಮಂಥ ದೇಶಗಳ ಬೆಳವಣಿಗೆಗೆ ಎಷ್ಟೋ ಸಹಾಯವಾಗುತ್ತದೆ.

ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಮಿಲಿಟರಿಗಾಗಿ ಹಾಕುತ್ತಿರುವ 300,000 ಡಾಲರುಗಳಲ್ಲಿ 600,000 ಶಾಲೆಗಳನ್ನು ನಿರ್ಮಿಸಬಹುದು. 300 ಮಿಲಿಯನ್ ಜನರಿಗೆ 60 ಮಿಲಿಯನ್ ಸುಖದ ಮನೆ ಒದಗಿಸಬಹುದು. ಅಥವಾ 18 ಮಿಲಿಯನ್ ಹಾಸಿಗೆಗಳುಳ್ಳ 30,000 ಆಸ್ಪತ್ರೆಗಳನ್ನು ಕಟ್ಟಬಹುದು. ಅದರಲ್ಲಿ 20 ಮಿಲಿಯನ್ ಕೆಲಸಗಾರರಿಗೆ ಉದ್ಯೋಗ ಕೊಡಬಹುದು. 150 ಮಿಲಿಯನ್ ಹೆಕ್ಟೇರುಗಳಿಗೆ ನೀರಾವರಿ ವ್ಯವಸ್ಥೆ ನಿರ್ಮಿಸಬಹುದು.

ಸೌಜನ್ಯ : ಐಕ್ಯರಂಗ

ಈ ಪತ್ರಿಕೆಯು ರಾಮದೇವ ರಾಕೆ ಅವರ ಸಂಪಾದಕತ್ವದಲ್ಲಿ, ನೂತನ್ ಪ್ರಿಂಟಿಂಗ್ ಪ್ರೆಸ್, ಬೆಂಗಳೂರು-3 ಇಲ್ಲಿ ಮುದ್ರಿಸಲ್ಪಟ್ಟು ಎಚ್. ಗೋವಿಂದಯ್ಯ ಅವರಿಂದ ಪ್ರಕಟಿಸಲ್ಪಟ್ಟಿತು. ವಿಳಾಸ : 5ಎ-ವಾಣಿ ವಾಣಿಜ್ಯಶಾಲಾ, ಪತ್ರಕರ್ತರ ಕಾಲೋನಿ. ಬೆಂಗಳೂರು-560002.